ಲೋಕಾಯುಕ್ತ ಅಸ್ತಿತ್ವಕ್ಕೆ ಬಂದ ಮೇಲೆ ನಡೆಸಿರುವ ದಾಳಿ ಮತ್ತು ಕ್ರಮಗಳು.

೧೭೪೮(ಬಿ). ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಲೋಕಾಯುಕ್ತವನ್ನು ಸ್ಥಾಪಿಸಿದ ವರ್ಷ ಯಾವುದು? ಇದನ್ನು ಅಸ್ತಿತ್ವಕ್ಕೆ ತರಲು ಹಿದಗಿ ಬಂದ ಕಾರಣವೇನು?

ಆ) ಇದು ರಾಜ್ಯಾದ್ಯಂತ ನಡೆಯಿಸಿರುವ ದಾಳಿಗಳೆಷ್ಟು ಮತ್ತು ಅವರುಗಳ ಮೇಲಿನ ಕ್ರಮವೇನು ಇದರಿಂದ ಎಷ್ಟು ಅಕ್ರಮ ಹಣ, ನ್ಯಾಯಬಾಹಿರ ಗಳಿಕೆಯ ಆಸ್ತಿ ದೊರತಿದೆ.

ಇ) ಲೋಕಾಯುಕ್ತರ ದಾಳಿಯಿಂದ ಸಾಬೀತಾಗಿ ಸೇವೆಯಿಂದ ಅಮಾನತ್ತಿನಲ್ಲಿಟ್ಟಿದ್ದರೂ ಪುನಃ ಸೇವೆಗೆ ಸೇರಿಸಿಕೊಂಡಿರುವವರ ಸಂಖ್ಯೆ ಎಷ್ಟು ಹಾಗೂ ಇವರನ್ನು ಕಡ್ಡಾಯವಾಗಿ ಸೇವೆಯಿಂದ ತೆಗೆದುಹಾಕಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಕರ್ನಾಟಕದಲ್ಲಿ ಲೋಕಾಯುಕ್ತವು ಜನವರಿ ೧೯೮೬ರಂದು ಅಸ್ತಿತ್ವಕ್ಕೆ ಬಂದಿದೆ. ಲೋಕಾಯುಕ್ತವನ್ನು ಸ್ಥಾಪಿಸಿದ ಧ್ಯೇಯೋದ್ದೇಶಗಳು ಹೀಗಿವೆ.

> "ಕರ್ನಾಟಕ ಸರ್ಕಾರದಿಂದ ಅಥವಾ ಅದರ ಪರವಾಗಿ, ಅಥವಾ ಕರ್ನಾಟಕ ರಾಜ್ಯದಲ್ಲಿರುವ ಕೆಲವು ಸಾರ್ವಜನಿಕ ಪ್ರಾಧಿಕಾರಗಳಿಂದ ಅಥವಾ ಅವುಗಳ ಪರವಾಗಿ ಕೆಲವೊಂದು ಸಂದರ್ಭಗಳಲ್ಲಿ ಕೈಗೊಂಡ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ–I ಅಥವಾ ಪಟ್ಟಿ III‌ರಲ್ಲಿ ನಿರ್ದಿಷ್ಟಪಡಿಸಲಾದ ವಿಷಯಗಳಿಗೆ, ಸಂಬಂಧಪಡಬಹುದಾದ ಆಡಳಿತಾತ್ಮಕ ಕ್ರಮದ (ಅಂಥ ಕ್ರಮಕ್ಕೆ ಸಂಬಂಧಪಟ್ಟಂತೆ ಅಥವಾ ಅದರಿಂದುಂಟಾಗುವ ಯಾವುದೇ ಲೋಪ ಮತ್ತು ನೆರವೇರಿಕೆ ಸೇರಿದಂತೆ) ವಿಚಾರಣೆ ನಡೆಸುವುದಕ್ಕಾಗಿ ಕೆಲವು ಪ್ರಾಧಿಕಾರಿಗಳ ನೇಮಕಾತಿ ಮತ್ತು ಅವುಗಳ ಪ್ರಕಾರ್ಯಗಳಿಗೆ ಮತ್ತು ಅವುಗಳಿಗೆ ಸಂಬಂಧಪಟ್ಟ ಅಥವಾ ಅವುಗಳಿಗೆ ಅನುಷಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವುದು."

ಆ) ದಾಳಿಗಳ ಸಂಖ್ಯೆ: ೪೨. ಇವುಗಳಲ್ಲಿ ಒಂದು ಪ್ರಕರಣದಲ್ಲಿ 'ಬಿ' ರಿಪೋರ್ಟ್ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ. ಇನ್ನುಳಿದ ಪ್ರಕರಣಗಳಲ್ಲಿ ತನಿಖೆ ಮುಂದುವರೆಯುತ್ತಿದೆ. ಒಟ್ಟು ಸುಮಾರು ರೂ. ೨೩. ಲಕ್ಷ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಲಾಗಿದೆ. ಅಕ್ರಮವಾಗಿ ಸಂಪಾದಿಸಿದ ಆಸ್ತಿಯ ಮೌಲ್ಯವು, ತನಿಖೆ ಪೂರ್ತಿ ಆದ ಬಳಿಕ ತಿಳಿದುಬರುವುದು.

ಇ) ೩೨ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲಾಗಿದೆ. ಅವರುಗಳಲ್ಲಿ ೯ ಅಧಿಕಾರಿಗಳನ್ನು ಪುನರ್ ನೇಮಿಸಲಾಗಿದೆ. ಉಳಿದ ಪ್ರಕರಣಗಳಲ್ಲಿ ೧೦ ಅಧಿಕಾರಿಗಳನ್ನು ಇದುವರೆವಿಗೂ ಅಮಾನತ್ತಿನಲ್ಲಿಟ್ಟಿರುವುದಿಲ್ಲ. ಈ ಎಲ್ಲಾ ಅಧಿಕಾರಿಗಳನ್ನು ಸೇವೆಯಿಂದ ತೆಗೆದುಹಾಕಬೇಕೆ ಎಂಬ ಬಗ್ಗೆ ತನಿಖೆ ಅಥವಾ ಇವರ ವಿರುದ್ಧ ಹೂಡಬಹುದಾದ ಮೊಕದ್ದಮೆ ಕೊನೆಯ ಫಲಿತಾಂಶಕ್ಕನುಗುಣವಾಗಿ ನಿರ್ಧರಿಸಲಾಗುವುದು.

ಬೆಂಗಳೂರು ಕೂಡ್ಲಿಗಿ ನಡುವೆ ಓಡುತ್ತಿರುವ ಬಸ್ಸುಗಳು.

೧೩೪೮. ಶ್ರೀ ಎನ್.ಟಿ. ಬೊಮ್ಮಣ್ಣ, (ಕೂಡ್ಲಿಗಿ).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಕೂಡ್ಲಿಗಿ ನಡುವೆ ಪ್ರತಿ ದಿವಸ ಓಡುತ್ತಿರುವ ವೇಗದೂತ ಮತ್ತು ಶಟಲ್ ಬಸ್ಸುಗಳ ಒಟ್ಟು ಸಂಖ್ಯೆ ಎಷ್ಟು?

ಆ) ರಾತ್ರಿ ವೇಳೆಯಲ್ಲಿ ಇನ್ನೂ ಹೆಚ್ಚು ಬಸ್ಸುಗಳು ಓಡಿಸಲು ಮನವಿಗಳೇನಾದರೂ ಬಂದಿದೆಯೇ ಹಾಗಿದ್ದಲ್ಲಿ, ಸರ್ಕಾರದವರು ಸದರಿ ಮನವಿಗಳ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ೨ ಸುವಿಹಾರಿ, ೨ ಅತಿ ಸುಖಾಸೀನ ಮತ್ತು ೧೦ ವೇಗದೂತ ಸೇರಿ ಪ್ರಸಕ್ತ ಒಟ್ಟು ೧೪ ಸಾರಿಗೆಗಳ ಸೌಲಭ್ಯವನ್ನು ಬೆಂಗಳೂರು ಕೂಡ್ಲಿಗಿ ಮಾರ್ಗದಲ್ಲಿ ಓಡಿಸುತ್ತಿದೆ.

ಆ) ಈ ಮಾರ್ಗದಲ್ಲಿ ಹಗಲು ಅಥವಾ ರಾತ್ರಿ ಹೆಚ್ಚು ಬಸ್ ಓಡಿಸಲು ಯಾವುದೇ ರೀತಿಯ ಮನವಿಗಳು ಬಂದಿರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸಲಾಗುವ ಪ್ರಶ್ನೆಗಳು

ಶ್ರೀ ಎ. ಲಕ್ಷ್ಮೀಸಾಗರ್. —ಅಧ್ಯಕ್ಷರೆ ಲಿಖಿತ ಮೂಲಕ ಉತ್ತರಿಸಲಾಗುವ ಪ್ರಶ್ನೋತ್ತರ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಮಂಡಿಸಲಾಗಿದೆ.

ಮಂಡಲ ಪಂಚಾಯಿತಿ ಚುನಾವಣೆಗಳಾದ ನಂತರ ಆಗಿರುವ ಕೊಲೆಗಳು

೧೯೫೨. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಮಂಡಲ ಪಂಚಾಯಿತಿ ಚುನಾವಣೆಗಳಾದ ನಂತರ ಕೊಲೆಯಾಗಿರುವವರ ಸಂಖ್ಯೆ ಎಷ್ಟು? (ಮಂಡಲವಾರುವಿವರ ನೀಡುವುದು).

ಆ) ಈ ಪೈಕಿ ರಾಜಕೀಯವಾಗಿ ಕೊಲೆಯಾಗಿರುವ ಹಿನ್ನೆಲೆಯಲ್ಲಿ ಕೊಲೆಯಾದವರ ಮನೆತನಕ್ಕೆ ಸರ್ಕಾರದಿಂದ ನೀಡಲಾಗಿರುವ ಪರಿಹಾರವೆಷ್ಟು?

ಇ) ಕೊಲೆ ಮಾಡಿರುವ ಕೊಲೆಗಡುಕರಿಗೆ ಶಿಕ್ಷೆ ವಿಧಿಸುವುದರಲ್ಲಿ ಹಾಗೂ ಅಪರಾಧಗಳನ್ನು ಗುರುತಿಸುವಲ್ಲಿ ಪೋಲೀಸ್ ಇಲಾಖೆ ವಿಫಲವಾಗಿರುವುದು ನಿಜವೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ೧೫೨೪ ಕೊಲೆಗಳು (ಪಟ್ಟಿ ಲಗತ್ತಿಸಿದೆ)

ಆ) ಅಪರಾಧಿಯೆಂದು ನಿರ್ಣಯವಾಗುವವರೆಗೂ ಇದು ರಾಜಕೀಯ ಹಿನ್ನೆಲೆಯು ಕೊಲೆಯೆಂದು ಹೇಳಲು ಬರುವುದಿಲ್ಲ. ಆದಾಗ್ಯೂ ಒಂದು ಪ್ರಕರಣದಲ್ಲಿ ೫,೦೦೦-೦೦ ರೂಪಾಯಿ ಪರಿಹಾರ ನೀಡಲಾಗಿದೆ.

ಇ) ಇಲ್ಲ, ಇಲ್ಲಿಯವರೆಗೆ ಈ ಪ್ರಕರಣಗಳಿಗೆ ಸಂಬಂಧಿಸಿದ ೩೦೪ ಆಪಾದಿತರನ್ನು ಗುರುತಿಸಿ ಬಂಧಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.